ಡಾ: ಎಚ್.ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) –

ಅ) ರಾಯಚೂರು ಜಿಲ್ಲೆಗೆ ಕಳೆದ ಮೂರು ವರ್ಷಗಳಿಂದ ವಿವಿಧ ಯೋಜನೆ ಮತ್ತು ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ಮಂಜೂರಾದ ಕಾಮಗಾರಿಗಳು, ಮಂಜೂರಾದ ಹಾಗೂ ಖರ್ಚಾದ ತಾಲ್ಲೂಕುವಾರು ಹಣದ ವಿವರವನ್ನು ಅನುಬಂಧ–1ರಲ್ಲಿ ಒದಗಿಸಲಾಗಿದೆ.

ಆ) ದೇವದುರ್ಗ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ವಿವಿಧ ಯೋಜನೆ ಮತ್ತು ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ತೆಗೆದುಕೊಂಡ ಕಾಮಗಾರಿಗಳ ಗ್ರಾಮವಾರು ವಿವರಗಳನ್ನು ಅನುಬಂಧ–1, 2 ಮತ್ತು 3ರಲ್ಲಿ ಒದಗಿಸಲಾಗಿದೆ.

ಇ) ವಿವರಗಳನ್ನು ಅನುಬಂಧ–1, 2 ಮತ್ತು 3ರಲ್ಲಿ ಒದಗಿಸಲಾಗಿದೆ.

ಈ) ವಿವರಗಳನ್ನು ಅನುಬಂಧ–1, 2 ಮತ್ತು 3ರಲ್ಲಿ ಒದಗಿಸಲಾಗಿದೆ.

ಉ) ದೇವದುರ್ಗ ತಾಲ್ಲೂಕಿನಲ್ಲಿ ಪಲಕನಮರಡಿ ಹಾಗೂ

2) ಕಿರಿಯ ಇಂಜಿನಿಯರ್, ಜಿ.ಪಂ.ಇ. ಉಪವಿಭಾಗ, ದೇವದುರ್ಗ ಇವರ ವಿರುದ್ಧ ಹಣ ದುರುಪಯೋಗಪಡಿಸಿಕೊಂಡ ಬಗ್ಗೆ ಇಲಾಖಾ ವಿಚಾರಣೆ ನಡೆಯುತ್ತಿದೆ.

1905 (2210) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಕೃಷಿ ಸಚಿವರು ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ರೈತರಿಗೆ ಯಾವ ಯಾವ ಸಾಲಿನ ಬೆಳೆ ವಿಮೆ ಬಿಡುಗಡೆ ಮಾಡಲು ಬಾಕಿ ಇದೆ; (ವರ್ಷವಾರು ವಿವರ ಒದಗಿಸುವುದು);

ಆ) ಎಷ್ಟು ಸಮಯದಿಂದ ಬಾಕಿ ಇದೆ ಮತ್ತು ಎಷ್ಟು ಹಣ ಯಾವ ಯಾವ ಜಿಲ್ಲೆಯ ರೈತರಿಗೆ ನೀಡಲು ಬಾಕಿ ಇದೆ ; (ಪ್ರತ್ಯೇಕವಾಗಿ ವಿವರ ನೀಡುವುದು)

ಇ) ಬೆಳೆ ವಿಮೆ ಹಣ ಬಿಡುಗಡೆಯಾಗುವಾಗ ತಾರತಮ್ಯವಾಗಿರುವುದು ಹಾಗೂ ಬೆಳೆ ನಾಶದ ಸಮಯದಲ್ಲಿನ ಸಮೀಕ್ಷೆಯಲ್ಲಿ ಲೋಪದೋಷವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು):

ಅ) 2003ರ ಮುಂಗಾರು ಹಂಗಾಮಿನಲ್ಲಿ ಸುಮಾರು 11000 ರೈತರ ಅಂದಾಜು ರೂ.12.00 ಕೋಟಿ ಬೆಳೆ ವಿಮಾ ನಷ್ಟ ಪರಿಹಾರ ಬಿಡುಗಡೆ ಮಾಡಬೇಕಾಗಿದೆ. 2003–04ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನ ಬೆಳೆ ವಿಮಾ ನಷ್ಟ ಪರಿಹಾರದ ರೂ.221.34 ಕೋಟಿಗಳು ರೈತರಿಗೆ ಇತ್ಯರ್ಥವಾಗಬೇಕಾಗಿದೆ.(ಜಿಲ್ಲಾವಾರು ವಿವರ ಅನುಬಂಧದಲ್ಲಿ ನೀಡಲಾಗಿದೆ)

ಆ) 2003ರ ಮುಂಗಾರು ಹಂಗಾಮಿನಲ್ಲಿ ಸುಮಾರು 11000 ರೈತರಿಗೆ ಸುಮಾರು 7 ತಿಂಗಳಿನಿಂದ ಬಾಕಿ ಇದೆ. ಈ ಹಂಗಾಮಿನ ಬೆಳೆ ವಿಮಾ ನಷ್ಟ ಪರಿಹಾರವನ್ನು ಭಾರತೀಯ ಕೃಷಿ ವಿಮಾ ಕಂಪನಿ ನಿಯಮಿತ ಸಂಸ್ಥೆಯು 13 ಜಿಲ್ಲೆಗಳಲ್ಲಿ ತನಿಖೆಗೆ ಒಳಪಡಿಸಿದ್ದು ತನಿಖಾ ಸಮಯದಲ್ಲಿ ಕೆಲವು ಬ್ಯಾಂಕುಗಳು ದಾಖಲಾತಿಗಳನ್ನು ಒದಗಿಸದೆ ಕಾರಣ ಇವರ ಬೆಳೆ ವಿಮಾ ನಷ್ಟ ಪರಿಹಾರವನ್ನು ವಿಮಾ ಸಂಸ್ಥೆಯು ತಡೆಹಿಡಿದಿದೆ. ಬ್ಯಾಂಕುಗಳು ದಾಖಲಾತಿಗಳನ್ನು ಒದಗಿಸಿದ್ದು ತನಿಖೆ ಪೂರ್ಣಗೊಂಡಿರುತ್ತದೆ. ವಿಮಾ ಸಂಸ್ಥೆಯು ತನಿಖಾ ವರದಿಯನ್ನು ಪರಿಶೀಲಿಸುತ್ತಿದ್ದು ಶೀಘ್ರದಲ್ಲೇ ಇವರ ಬೆಳೆ ವಿಮಾ ನಷ್ಟ ಪರಿಹಾರ ಇತ್ಯರ್ಥ ಪಡಿಸಲಿದೆ. ಜಿಲ್ಲಾವಾರು ಇತ್ಯರ್ಥಪಡಿಸಬೇಕಾದ ಬೆಳೆ ವಿಮಾ ನಷ್ಟ ಪರಿಹಾರದ ವಿವರಗಳನ್ನು ಪರಿಶೀಲನೆಗೊಳಿಸಿದ ನಂತರ ವಿಮಾ ಸಂಸ್ಥೆಯು ನೀಡುತ್ತದೆ. 2003–04ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನ ಬೆಳೆ ವಿಮಾ ನಷ್ಟ ಪರಿಹಾರ ಇತ್ಯರ್ಥಪಡಿಸುವಿಕೆ ಒಂದು ತಿಂಗಳಿನಿಂದ ಬಾಕಿ ಇದೆ. ಈ ಹಂಗಾಮಿನ ಬೆಳೆ ವಿಮಾ ನಷ್ಟ ಪರಿಹಾರ ಇತ್ಯರ್ಥಪಡಿಸಲು ರಾಜ್ಯ ಸರ್ಕಾರದ ಪಾಲಾದ ರೂ. 101.64 ಕೋಟಿಗಳನ್ನು ದಿನಾಂಕ; 18–02–2005ರಂದು ವಿಮಾ ಸಂಸ್ಥೆಗೆ ನೀಡಲಾಗಿದೆ. ಇದಕ್ಕೆ ಸರಿಸಮನಾಗಿ ಕೇಂದ್ರಸರ್ಕಾರದ ಪಾಲಿನ ಹಣ ವಿಮಾ ಸಂಸ್ಥೆಗೆ ನೇರವಾಗಿ ಬಿಡುಗಡೆಯಾಗಬೇಕಾಗಿದೆ. ಕೇಂದ್ರ ಸರ್ಕಾರ ಅದರ ಪಾಲಿನ ಹಣವನ್ನು ಬಿಡುಗಡೆ ಮಾಡಿದ ನಂತರ ರೈತರಿಗೆ ವಿಮಾ ಸಂಸ್ಥೆಯು ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸುತ್ತದೆ. ಇತ್ಯರ್ಥಪಡಿಸಬೇಕಾದ ಬೆಳೆ ವಿಮಾನಷ್ಟ ಪರಿಹಾರದ ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಇಲ್ಲ.

ಈ) ಅನ್ವಯಿಸುವುದಿಲ್ಲ.

ಅನುಬಂಧ

2003–04ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಇತ್ಯರ್ಥಪಡಿಸಬೇಕಾಗಿರುವ ಬೆಳೆ ವಿಮಾ ನಷ್ಟ ಪರಿಹಾರ (ಲಕ್ಷ ರೂ.ಗಳಲ್ಲಿ)

ಕ್ರ.ಸ.	ಜಿಲ್ಲೆಯಹೆಸರು	ಹಿಂಗಾರು	ಬೇಸಿಗೆ	ಒಟ್ಟು
1	ಬೆಂಗಳೂರು	0.00	0.00	0.00
2	ಬೆಳಗಾವಿ	2556.84	2.73	2559.57
3	ಬಳ್ಳಾರಿ	62.73	0.79	63.52
4	ಬೀದರ್	4.87	0.00	4.87
5	ಬಿಜಾಪುರ	3678.45	0.94	3679.39
6	ಚಿಕ್ಕಮಗಳೂರು	48.32	0.06	48.38
7	ಚಿತ್ರದುರ್ಗ	397.72	0.08	397.80
8	ದಕ್ಷಿಣ ಕನ್ನಡ	0.00	0.00	0.00
9	ಧಾರವಾಡ	5353.04	0.00	5353.04
10	ಗುಲ್ಬರ್ಗಾ	512.20	0.00	512.20
11	ಹಾಸನ	1077.55	0.00	1077.55
12	ಕೋಲಾರ	0.09	0.00	0.09
13	ಮಂಡ್ಯ	104.66	3.02	107.68
14	ಮೈಸೂರು	172.92	0.00	172.92
15	ರಾಯಚೂರು	648.21	8.16	656.37
16	ಶಿವಮೊಗ್ಗ	0.00	0.05	0.05
17	ತುಮಕೂರು	0.00	0.05	0.05
18	ಉತ್ತರಕನ್ನಡ	0.00	0.00	0.00
19	ಕೊಡಗು	0.00	0.00	0.00
20	ಕೊಪ್ಪಳ	1035.90	21.55	1057.45
21	ಚಾಮರಾಜನಗರ	34.98	0.00	34.98
22	ದಾವಣಗೆರೆ	21.32	0.35	21.67
23	ಬಾಗಲಕೋಟೆ	2873.78	2.15	2875.93
24	ಗದಗ	2599.80	49.74	2649.54

25 ಹಾವೇರಿ	848.58	13.06	861.64
26 ಉಡುಪಿ	0.00	0.00	0.00
ಒಟ್ಟು	22031.96	102.73	22134.69

2205 (3189): ಶ್ರೀ ಶಿವಣ್ಣ ಎಸ್. (ತುಮಕೂರು) : ಮಾನ್ಯ ಕಂದಾಯ ಸಚಿವರು ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ದೇವಾದಾಯ ಇನಾಂ ಹಾಗೂ ಭೂದಾನಗಳ ಜಮೀನಿನ ವಿಸ್ತೀರ್ಣವೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ತುಮಕೂರು ಜಿಲ್ಲೆಯಲ್ಲಿರುವ ದೇವಾದಾಯ ಇನಾಂ ಹಾಗೂ ಭೂದಾನಗಳ ಜಮೀನಿನ ವಿಸ್ತೀರ್ಣವೆಷ್ಟು (ತಾಲೂಕುವಾರು ಮಾಹಿತಿ ನೀಡುವುದು);

ಇ) ರಾಜ್ಯದಲ್ಲಿ ಈ ಜಮೀನುಗಳು ಯಾರ ಅನುಭವದಲ್ಲಿರುತ್ತವೆ;

ಈ) ಇದರಿಂದ ಬರುತ್ತಿರುವ ಆದಾಯ ನಿಗದಿ ಪಡಿಸಿದ ಉದ್ದೇಶಕ್ಕೆ ಬಳಕೆಯಾಗುತ್ತಿದೆಯೇ;

ಉ) ಈ ಜಮೀನುಗಳಲ್ಲಿ ಗೇಣಿದಾರರಿಗೇ / ಅನುಭವಿಧಾರರಿಗೇ ಹಕ್ಕುಪತ್ರ ನೀಡಲು ಭೂಸುಧಾರಣೆ ಕಾಯ್ದೆ ಹಾಗೂ ಮರು ಮಂಜೂರಾತಿ ಕಾಯ್ದೆ ಅನ್ವಯಿಸುವುದೇ?

ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು):

ಅ) ದೇವಾದಾಯ ಇನಾಂ ಭೂದಾನ ಜಮೀನುಗಳು

ಜಮೀನುಗಳು	
1,35,591,55	8,859.21

ಜಿಲ್ಲಾವಾರು ಮಾಹಿತಿಯನ್ನು ಅನುಬಂಧ 1ರಲ್ಲಿ ನೀಡಿದೆ.

ಆ) ದೇವಾದಾಯ ಇನಾಂ ಭೂದಾನ ಜಮೀನುಗಳು

ಜಮೀನುಗಳು	
19,988.27	1,843.26

ಎಕರೆಗಳು ಎಕರೆಗಳು